ಮಷೀನುಗಾಣ ಹುಡಿಹಾರಿಸುತ್ತಿದ್ದರೆ ಪೈಪಲ್ಲಿ ಕಬ್ಬಿನರಸ ಮೂರುನಾಲ್ಕು ಕೊಪ್ಪರಿಗೆಗಳಿಗೆ ಬಿದ್ದು ಒಂದೇ ದಿನಕ್ಕೆ ಎಲ್ಲಾ ಮುಗಿಸಿ ಜನ ಮನೆಸೇರಿಕೊಂಡು ಟೀವಿ ನೋಡುವ ಕಾಲವಿರುವಾಗ ಇದ್ಯಾವ ಗ್ರಾಚಾರ ಕೆಟ್ಟು ಇವರು ಇಂತದನ್ನ ಹುಡುಕಿ ಹುಡುಕಿ ಮೈಮೇಲೆ ಹಾಕ್ಕಳೋಕೆ ನೋಡತಿದಾರೆ ಅಂತ ಗಾಬರಿಯಾದ.

ಮುತ್ತಾಚಾರಿಗೀಗ ಹತ್ತಿರ ಹತ್ತಿರ ಎಪ್ಪತ್ತು ವರ್ಷ. ಅವನ ಅಪ್ಪ ಅನಂತಾಚಾರಿ. ಈ ಆಚಾರಿ ಅನ್ನುವುದು ಆಚಾರ್ಯ ಅನ್ನುವುದರ ತದ್ಭವ ರೂಪ. ಒಂದು ಕಾಲದಲ್ಲಿ ಆಯ್ದ ಮರಮಟ್ಟು ಬಳಸಿ ದೊಡ್ಡದೊಡ್ಡ ಉಪ್ಪರಿಗೆ ಮನೆಗಳನ್ನು ವಾಸ್ತುಶಾಸ್ತ್ರದಲ್ಲಿ ಹೇಳಿದಂತೆ ಅಂಕಣ, ಆಯಗಳ ಲೆಕ್ಕಹಾಕಿ ನಿರ್ಮಿಸುವ ಕುಶಲ ಕೆಲಸಗಾರರ ವಂಶ ಅವರದು. ಘಟ್ಟದ ಕೆಳಗೂ ಮೇಲೂ ಅನೇಕ ಊರುಗಳಲ್ಲಿ ಅವರ ವಂಶಸ್ಥರು ನಿರ್ಮಿಸಿಕೊಟ್ಟ ಹಳೇ ಮನೆಗಳು ಅದ್ಭುತ ಮರಗೆಲಸವನ್ನು ಬಿತ್ತರಿಸುತ್ತ ಈಗಲೂ ನಿಂತಿವೆ. ಕಂಬ, ತೊಲೆ, ಜಂತಿ, ಉದ್ದಿಗೆ, ದಾರಂದ ಮುಂತಾಗಿ ಕಟ್ಟಡಕ್ಕೆ ಸಂಬಂಧಿಸಿದ ಶಬ್ದಕೋಶವೇ ಮುಂದಿನ ಪೀಳಿಗೆಯವರಲ್ಲಿ ಲಯವಾಗಿಹೋದ ಈ ಕಾಲದಲ್ಲಿ ಅವಶೇಷವಾಗಿ ಬದುಕುತ್ತಿದ್ದ ಆತ. ಅವನ ಮಕ್ಕಳು ಮೊಮ್ಮಕ್ಕಳು ಬೆಂಗಳೂರು ಶಿವಮೊಗ್ಗಗಳಲ್ಲಿ ಕಂಟ್ರಾಕ್ಟರುಗಳಲ್ಲಿ ಕೆಲಸ ಮಾಡುತಿದ್ದರು. ಬಾಗಿಲು, ಕಿಟಕಿ, ಚೌಕಟ್ಟು ಎಲ್ಲಾ ಏಕತಾನದ ಅಳತೆ ವಿನ್ಯಾಸದಲ್ಲಿ ಮಾಡಿ ರಾಶಿ ಒಟ್ಟಿ, ಅಪಾರ್ಟ್‌ಮೆಂಟು ಕಟ್ಟುವವರಿಗೆ ಸರಬರಾಜು ಮಾಡುವ ದಂಧೆಯಲ್ಲಿ ಮರಗೆಲಸದವರಿಗೆ ಒಳ್ಳೇ ಕೂಲಿ ಸಿಗುತ್ತಿತ್ತು. ಒತ್ತಾಯ ಮಾಡಿದ್ದಕ್ಕೆ ಮುತ್ತಾಚಾರಿಯೂ ಅಷ್ಟುಕಾಲ ಬೆಂಗಳೂರಿಗೆ ಹೋಗಿದ್ದ. ಯಾವ್ಯಾವುದೋ ಕಾಡುಮರಗಳನ್ನು ಹುಳುಕು ಒಡಕು ಎಲ್ಲಾ ಮೇಣದಲ್ಲಿ ಮುಚ್ಚಿ, ಮಷೀನಿನಲ್ಲಿ ಗೀರುಹಾಕಿ ಚಕ್ಕೆ ಹಾರಿಸಿ, ಜೋಡಿಸಿದ ಪಡಕಿನಲ್ಲಿ ಫೆವಿಕಾಲು ಹಾಕಿ, ಒಂದೊಂದು ಮೊಳೆ ಜಡಿದು ರಾಶಿಹೊಡೆಯುವ ಕೆಲಸ ಹಾದರಕ್ಕೆ ಹಚ್ಚಿದ ಭಾವ ಹುಟ್ಟಿಸುತ್ತಾ, ಒಗ್ಗದೇ ಊರಿಗೆ ಬಂದುಬಿಟ್ಟಿದ್ದ. ಈಗಿನ ಮರಗೆಲಸದವರು ಅಂದ್ರೆ ಒಂದು ಸುತ್ತಿಗೆ ಒಂದು ಕೇಜಿ ಮೊಳೆ ಇದ್ರೆ ಸಾಕು ಅಂತ ಬಯ್ಯುತ್ತಿದ್ದ. ರಾಮಣ್ಣನವರ ಹಳೇ ಸಂಪ್ರದಾಯದ ಆಲೇಮನೆ ನಡೆಸುವ ಆಸೆ ಅವನಲ್ಲಿ ಒಂದು ಚೇತನವನ್ನು ಹುಟ್ಟುಹಾಕಿಬಿಟ್ಟಿತು. ಹಳೆ ನೆನಪುಗಳನ್ನು ಕೆದಕುತ್ತ ಸುಮಾರು ಊರುಗಳ ಆಲೆಮನೆಗಳನ್ನು ನೆನಪಿಸಿಕೊಳ್ಳುತ್ತ ಅಲ್ಲಿ ಕೇಳುವ ಇಲ್ಲಿ ವಿಚಾರಿಸುವ ಅನ್ನುತ್ತ ಯಾದಿ ತಯಾರಿಸಿ ಸಂಭ್ರಮಿಸತೊಡಗಿದ. ಇವರ ಆಲೋಚನೆ ಗೊತ್ತಾಗಿ ಕಂಗಾಲಾದ ಗೌರಕ್ಕ 'ಅಯ್ಯಯ್ಯ!... ತಿಂಗಳುಗಟ್ಲೆ ಆ ಗದ್ದೆಬಯಲಲ್ಲಿ ಹಗಲುರಾತ್ರಿ ಭಂಗಪಟ್ಗೊಂಡು, ಈ ವಯಸ್ಸಲ್ಲಿ ನಿಮಗ್ಯಾಕಪ್ಪಾ ಈ ಬುದ್ಧಿ ಬಂತು ಭಗವಂತಾ...' ಅಂತ ಸುರು ಹಚ್ಚಿದ್ದಕ್ಕೆ 'ಏನೂ ಆಗಲ್ಲ, ನೀ ಸುಮ್ನಿರು ಈಗ' ಅಂತ ತೊಡೆ ಕುಣಿಸಿದರು.

ಬೆಳಿಗ್ಗೆ ಆಸರಿ ಕುಡಿಯುವ ಹೊತ್ತಿಗೇ ಬಂದ ಮುತ್ತಾಚಾರಿ. ಅವನಿಗೂ ಹೊಟ್ಟೆತುಂಬಾ ದೋಸೆ ಚಹಾ ಕೊಡಿಸಿ, ಇಬ್ಬರೂ ಆಮೇಲೆ ಬಾಯಿತುಂಬ ಕವಳ ಹಾಕಿಕೊಂಡು ಅಂಗಳದೆದುರು ತಗ್ಗಿಳಿದು ಮರೆಯಾದರು. ಗಾಣದ ಕಣೆಯೇನೋ ಇತ್ತು ಅಂತ ಮೂಲೆಯಲ್ಲಿ ಬಿದ್ದಿದ್ದ ಒಂಟಿಕಣೆಯನ್ನು ತೋರಿಸಿದರು ಹಾಡಲಹಳ್ಳಿಯಲ್ಲಿ. ಅದೆಲ್ಲ ತುಕ್ಕು ಹಿಡಿದು ಹಳೇಸಾಮಾನಿಗೆ ಹಾಕಬೇಕಾಯ್ತು ಅಂದರು ಒಂದೂರಲ್ಲಿ. ಆ ರಗಳೆಯೆಲ್ಲ ಈಗ ಯಾರು ಹಚ್ಗೊಳ್ತಾರೆ? ಸುಮ್ನೆ ಮಷೀನುಗಾಣಕ್ಕೆ ಹೊಡೀರಿ ಅಂತ ಕೆಲವು ಕಡೆ ಉಪದೇಶ ಸಿಕ್ಕಿತು. ಹಲವು ಕಡೆ ಈಗೀಗ ಕಬ್ಬು ಬೆಳೆಯುವುದನ್ನೇ ಬಿಟ್ಟಿದ್ದರು. ವರ್ಷವಿಡೀ ಕೆಲಸ. ನೀರು, ಸುಡುಮಣ್ಣು ಅಂತ ರಗಳೆ. ಮೇಲಿಂದ ಕಾಡುಹಂದಿ, ನರಿಗಳ ಕಾಟ. ಆಮೇಲೆ ಲೆಕ್ಕ ಹಾಕಿದ್ರೆ